ಅಷ್ಟರಲ್ಲಿ ಕುಪ್ಪಣ್ಣಯ್ಯ ರಿಕ್ಷಾದಲ್ಲಿ ತಂದ ಸಾಮಾನುಗಳನ್ನು ಗೋವಿಂದಯ್ಯ ಹೋಟೆಲಿನ ಒಳಗೆ ತಂದಿರಿಸಿಯಾಗಿತ್ತು.'ಎಂಥ ಸೆಖೆ ಮಾರಾಯರೇ, ಈಗಲೇ 35-40 ಡಿಗ್ರಿ ಉಷ್ಣತೆ ಇದೆಯಂತೆ. ಇನ್ನು ಎರಡು ತಿಂಗಳಲ್ಲಿ ಇನ್ನೂ ಹೆಚ್ಚಾದರೆ ಈ ಕರಾವಳಿ ಕೂಡಾ ಗುಲ್ಬರ್ಗಾ, ಬೀದರ್ ಹಾಗೆ ಆಗುತ್ತದೆ!'ಎಂದರು ಬೆವರನ್ನು ಒರಸಿಕೊಳ್ಳುತ್ತಾ.

'ಹೌದೌದು!' ಎಂದ ದಾಸುಭಟ್ರು ತಾನು ಬಂದ ಉದ್ದೇಶವನ್ನು ಕುಪ್ಪಣ್ಣಯ್ಯನ ಮುಂದಿಡಬೇಕೆಂಬಂತೆ 'ಅದೆಲ್ಲ ಇರಲಿ ಬಿಡಿ ಇವರೇ! ಉಷ್ಣತೆ ಏರುವುದು ನನಗೆ ನಿಮಗೆ ಮಾತ್ರವಲ್ಲ?' ಎಂದು 'ಬನ್ನಿ. ನಿಮ್ಮ ಫ್ಯಾಮಿಲಿ ರೂಮಿಗೆ ಹೋಗುವ. ಸ್ವಲ್ಪ ನಿಮ್ಮಲ್ಲಿ ಮಾತನಾಡಲಿಕ್ಕೆ ಉಂಟು!' ಎಂದು ಎದ್ದು ನಿಂತರು.

ಕುಪ್ಪಣ್ಣಯ್ಯನ ಹೊಟೇಲಿನಲ್ಲಿ ಒಂದು ಸಣ್ಣ ಫ್ಯಾಮಿಲಿ ರೂಮಿತ್ತು. ಅದು ಕುಪ್ಪಣ್ಣಯ್ಯನಲ್ಲಿ ತೀರಾ ಖಾಸಗಿಯಾಗಿ ಮಾತನಾಡಲು ಬರುವವರಿಗೆ, ಹೊಸತಾಗಿ ಮದುವೆಯಾದ ವಧುವರರರಿಗೆ ಇಲ್ಲವೇ ಊರಿನ ಪಂಚಾಯತ್ ಕಚೇರಿಯ ನೌಕರರಿಗೆ, ಸರಕಾರಿ ಆಸ್ಪತ್ರೆಯ ವೈದ್ಯರಿಗೆ ಉಪಾಹಾರ ಸೇವಿಸಲು ಕಾದಿರಿಸಲ್ಪಟ್ಟಂತೆ ಇರುವ ರೂಮು. ಆದರೆ 'ದುರ್ಗಾಭವನ'ದಲ್ಲಿ ಕುಳಿತು ನಿಧಾನವಾಗಿ ಉಪಾಹಾರ ಸೇವಿಸುವವರು ಕಡಿಮೆ. ಅವಸರ ಅವಸರವಾಗಿ ಬಂದು ಅವಸರ ಅವಸರವಾಗಿ ತಿಂದುಂಡು ಹೋಗುವವರೇ ಹೆಚ್ಚು! ಅಂಥವರಿಗೆ ಈ ಹೊಟೇಲಿನಲ್ಲಿ ಫ್ಯಾಮಿಲಿ ರೂಮು ಇದೆ ಎಂದು ಗೊತ್ತಿದ್ದದ್ದೂ ಕಡಿಮೆ. ಗೊತ್ತಿದ್ದರೂ ಅಲ್ಲಿ ಕುಳಿತು ಉಪಾಹಾರ ಸೇವಿಸುವುದರಲ್ಲಿ ವಿಶೇಷ ಏನೂ ಇಲ್ಲವಲ್ಲ ಎಂದು ಆ ಕಡೆ ಇಣುಕುವವರು ಇಲ್ಲ!

ಇಬ್ಬರೂ ದುರ್ಗಾಭವನದ ಫ್ಯಾಮಿಲಿ ರೂಮಿಗೆ ಬಂದು ಇದಿರು ಬದಿರು ಕುಳಿತುಕೊಳ್ಳುತ್ತಿದ್ದಂತೆ ಕುಪ್ಪಣ್ಣಯ್ಯ ಗೋವಿಂದಯ್ಯನನ್ನು ಕರೆದು 'ಎರಡು ಚಹಾ ಮಾಡಿ ತಾಪ್ಪ' ಎಂದಾಗ, ದಾಸುಭಟ್ರು 'ನಾನು ಈಗ ತಾನೆ ಕುಡಿದದ್ದು. ಬೇಡವೇ ಬೇಡ' ಎಂದರು. 'ಸರಿ ಬಿಡಿ. ಒಂದು ಮಾತ್ರ ತಾಪ್ಪ' ಎಂದು ಹೋಟೆಲ್ ಮಾಣಿಗೆ ಹೇಳಿದ ಕುಪ್ಪಣಯ್ಯ, 'ಸರಿ ಏನದು? ಖಾಸಗಿಯಾಗಿ ಮಾತನಾಡುವಂತಾದ್ದು?' ಎಂದು ದಾಸುಭಟ್ರ ಕಣ್ಣಲ್ಲಿ ಕಣ್ಣಿಟ್ಟು ಪ್ರಶ್ನಿಸಿದರು.

ದಾಸುಭಟ್ರು ಕುಪ್ಪಣ್ಣಯ್ಯನವರ ನಾಲ್ಕಾರು ಆತ್ಮೀಯರಲ್ಲಿ ಒಬ್ಬರು. ಹರಕು ಬಾಯಿಯ ಅವರು ಬೊಬ್ಬೆ ಹೊಡೆಯದೇ ಇರುವುದು ಕುಪ್ಪಣ್ಣಯ್ಯನವರಲ್ಲಿ ಮಾತ್ರ! ತಮ್ಮ ಮನೆಯಿಂದ ಸೀತಾಪುರದ ಬೀದಿಗೆ ಬಂದರೆ, 'ದುರ್ಗಾಭವನ'ಕ್ಕೆ ಬಂದು ಕುಪ್ಪಣ್ಣಯ್ಯನಲ್ಲಿ ಮಾತನಾಡದೆ ಹೋಗುವವರಲ್ಲ. ಅವರು ತಮ್ಮ ಕಷ್ಟ ಸುಖ, ಊರ ರಾಜಕೀಯವನ್ನು ಒಟ್ಟೊಟ್ಟಿಗೆ ಹಂಚಿಕೊಂಡದ್ದು ಅನೇಕ ಸಲ. ಕುಪ್ಪಣ್ಣಯ್ಯನವರಲ್ಲಿ ಏನೇ ಶುಭಾಶುಭ ಕೆಲಸಗಳಿರಲಿ, ದಾಸುಭಟ್ರಿಗೆ ಆಹ್ವಾನ ಇದ್ದೇ ಇರುತ್ತಿತ್ತು. ದಾಸುಭಟ್ರೂ ಅಷ್ಟೆ. ತಮ್ಮ ಮನೆಯ ಮದುವೆ ಮುಂಜಿ ಶ್ರಾದ್ಧ ಇತ್ಯಾದಿಗಳಿಗೆ ಮೊದಲು ಕರೆಯುವುದು ಕುಪ್ಪಣ್ಣಯ್ಯನವರನ್ನೇ. ಕಳೆದ ಬಾರಿ ಸೀತಾಪುರದ ಗ್ರಾಮ ಪಂಚಾಯತ್ ಚುನಾವಣೆ ನಡೆದಾಗ ತಾನು 'ಚುನಾವಣೆಗೆ ನಿಂತರೆ ಹೇಗೆ?' ಎಂದು ದಾಸುಭಟ್ರು ಕುಪ್ಪಣ್ಣಯ್ಯನವರಲ್ಲಿ ಪ್ರಶ್ನಿಸಿದ್ದರು. ಆಗ ಕುಪ್ಪಣ್ಣಯ್ಯ 'ನೀವು ಚುನಾವಣೆಗೆ ನಿಲ್ಲುವುದಾ? ಬೇಕಾ ಇದು ನಿಮಗೆ?' ಎಂದಿದ್ದರು. ಆ ಮೇಲೆ ದಾಸುಭಟ್ರು ನಾಮಪತ್ರ ಸಲ್ಲಿಸಲು ಹೋದಾಗ, ಅವರನ್ನು ಅನುಮೋದಿಸಿದವರೂ ಕುಪ್ಪಣ್ಣಯ್ಯನೇ. ಚುನಾವಣೆ ಮುಗಿದ ಮೇಲೆ 'ಮತದಾನದಲ್ಲಿ ನೀವು ಸೋತರೂ ಒಳ್ಳೆ ಸ್ಪರ್ಧೆ ಕೊಟ್ಟದ್ದೀರಿ ನಿಮ್ಮ ಇದಿರಾಳಿಗೆ' ಎಂದು ನಗುತ್ತಾ 'ಎರಡು ದಿನ ನಾನೂ ಬಂದಿದ್ದೇನಲ್ಲ ನಿಮ್ಮ ಜೊತೆ, ಅದಕ್ಕೆ ಅಷ್ಟು ಮತ ನಿಮಗೆ ಬಿದ್ದದ್ದು!' ಎಂದು ತನ್ನ ಅಂಗಿಯ ಕಾಲರು ಹಿಡಿದು ಅಲುಗಾಡಿಸಿ ನಕ್ಕಿದ್ದರು. ಆಗ ದಾಸುಭಟ್ರು ನೊಂದುಕೊಳ್ಳದೆ 'ಹೌದು ಶೇಕಡಾ ಐವತ್ತು ಮತ ನನಗೆ ಬಿದ್ದದ್ದು ನಿಮ್ಮಿಂದಲೇ. ನಿಮ್ಮ ಹರಿತ ಮಾತು, ರಾಜಕೀಯ ನಿಲುವು, ನಮ್ಮ ಮತದಾರರಿಗೆ ಇಷ್ಟವಾಗಿತ್ತು ಎಂದು ನನಗೆ ಗೊತ್ತು!' ಎಂದಿದ್ದರು ಗಂಭೀರವಾಗಿ.

ಕುಪ್ಪಣ್ಣಯ್ಯ ಚಹಾ ಕುಡಿದು ಮುಗಿಸುವ ತನಕ ಸುಮ್ಮನಿದ್ದ ದಾಸುಭಟ್ರು 'ನಿಮಗೆ ನಮ್ಮ ಮನೆಯ ಹತ್ತಿರದ ಹುಡುಗಿ ಹುಚ್ಚು ನಾಯಿ ಕಡಿದು - ಏನದು ಸುಡುಗಾಡು ರೇಬಿಸ್ ಅಂತಲ್ವ ಅದರ ಹೆಸರು- ಮೊನ್ನೆ ಸತ್ತದ್ದು ಗೊತ್ತಿಲ್ವಾ?' ಎಂದು ಪ್ರಶ್ನಿಸಿದರು. ಕುಪ್ಪಣ್ಣಯ್ಯ 'ಹೌದಪ್ಪ ಹೌದು ಇಡೀ ಸೀತಾಪುರಕ್ಕೆ ಸುದ್ದಿಯಾಗಿದೆ. ಅದು ದೊಡ್ಡ ದುರಂತ. ಯಾರಿಗೂ ಹೀಗಾಗಬಾರದು. ಪಾಪ! ತುಂಬ ಒಳ್ಳೆ ಹುಡುಗಿ. ಬೀಡಿ ಕಟ್ಟಿ ಅಪ್ಪ